# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

## <u>ಸಿ.ಸಿ. ನಂ. **776 / 2021**</u>

ಸಿಡಬ್ಲ್ಯೂ- **14**
ಪಿಡಬ್ಲ್ಯೂ- **12**

<u>ದಿನಾಂಕಃ **19.07.2025.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | |
|---|---|
| ಸಾಕ್ಷಿಯ ಹೆಸರುಃ | - ಚಂದ್ರಶೇಖರ್ |
| ತಂದೆಯ/ಗಂಡನ ಹೆಸರುಃ | - ಬಸ್ಸಪ್ಪ |
| ವಯಸ್ಸುಃ | -? **45** ವರ್ಷ |
| ಉದ್ಯೋಗಃ | - ಮುಖ್ಯ ಪೊಲೀಸ್ ಪೇದೆ. |
| ವಾಸಸ್ಥಳಃ | - ಶಹಾಪೂರ ಪೋ.ಠಾಣೆ. |

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

2019 ರಿಂದ 2024 ವರೇಗೆ ಯಾದಗಿರಿ ಸಂಚಾರ ಪೊಲೀಸ್ ಠಾಣೆಯಲ್ಲಿ ನಾನು ಮುಖ್ಯ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 22.02.2021 ರಂದು ಮದ್ಯಾಹ್ನ 1.30 ಗಂಟೆಗೆ ಯಾದಗಿರಿ ಸರಕಾರಿ ಆಸ್ಪತ್ರೆಯಿಂದ ರಸ್ತೆಯ ಅಪಘಾತದಿಂದ ಎಂ ಎಲ್ ಸಿ ವರದಿ ಬಂದಿತ್ತು. ನಂತರ ವಿಚಾರಣೆ ಕುರಿತು ಯಾದಗಿರಿ ಸರಕಾರಿ ಆಸ್ಪತ್ರೆಗೆ ಹೋಗಿದ್ದೆ ಆವಾಗ ಗಾಯಗಳು ಅಲ್ಲಿ ಇರಲಿಲ್ಲ ಅವರು ಸ್ಕಾನ್ ಗೆ ಹೋಗಿ ಅವರು ಹೊಸ ಆಸ್ಪತ್ರೆಗೆ ಬಂದಿದ್ದರು. ಗಾಯಳು ಚಾಸಾ-1 ರವರ ಹೇಳಿಕೆ ದೂರನ್ನು ಪೆಡದುಕೊಂಡೆ. ಸದರಿ ಹೇಳಿಕೆ ದೂರಿನ ಆಧಾರದ ಮೇರೆಗೆ ಠಾಣಾ ಗುನ್ನಾ ಸಂಖ್ಯೆ 10/2021 ನೇದ್ದರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿದ್ದೆ. ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಯವರಿಗೆ ಕಳುಹಿಸಿಕೊಟ್ಟಿದ್ದೆ. ಸಾಕ್ಷಿಯು ಚಾಸಾ-1 ರವರು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 10 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಯಿತು. ದಿನಾಂಕಃ 23.02.2021 ರಂದು ಅಪಘಾತ ಸ್ಥಳಕ್ಕೆ ಹೋಗಿ ಬೆಳಗ್ಗೆ 8 ರಿಂದ 9 ಗಂಟೆಗೆಯ ವರೇಗೆ ಚಾಸಾ-

2 ಮತ್ತು 3 ರವರ ಸಮಕ್ಷಮ ಚಾಸಾ-8 ರವರು ತೋರಿಸಿದ ಸ್ಥಳದಲ್ಲಿ ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ. ಆ ಕಾಲಕ್ಕೆ ಒಂದು ಪೋಟೋವನ್ನು ತೆಗೆದಿರುತ್ತೇನೆ ಸಾಕ್ಷಿಯು ಅಪಘಾತ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿ ಅಪಘಾತ ಸ್ಥಳದಲ್ಲಿ ಇದ್ದ ಆಟೋ ರಿಕ್ಷಾದ ನಂಬರ ಕೆಎ-33-ಎ-8590 ನೇದ್ದನ್ನು ಐ ಎಂ ವಿ ತಪಾಸಣೆ ಕುರಿತು ಸದರಿ ವಾಹನವನ್ನು ನನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಆಟೋ ರಿಕ್ಷಾದ 4 ಛಾಯಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 11 ರಿಂದ 14 ಎಂದು ಗುರುತಿಸಲಾಯಿತು. ಅದೇ ರೀತಿ ದಿನಾಂಕಃ 22.10.2021 ರಂದು ಚಾಸಾ-1 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿದ್ದೆ. ಅದೇ ರೀತಿ ಚಾಸಾ-6 ರವರ ಪುರವಣಿ ಹೇಳಿಕೆಯನ್ನು ಸಹ ಪಡೆದುಕೊಂಡಿರುತ್ತೇನೆ. ಅದೇ ರೀತಿ ಚಾಸಾ-7 ರವರ ಹೇಳಿಕೆಯನ್ನು ಸಹ ದಾಖಲಿಸಿಕೊಂಡಿರುತ್ತೇನೆ. ಅದೇ ರೀತಿ ಚಾಸಾ-1,6 ಮತ್ತು 7 ರವರ ಪುರವಣಿ ಹೇಳಿಕೆಗಳನ್ನು ಸಹ ದಾಖಲಿಸಿಕೊಂಡಿರುತ್ತೇನೆ. ಅದೇ ರೀತಿ ಚಾಸಾ-8 ರಿಂದ 10 ರವರ ಹೇಳಿಕೆ ಮತ್ತು ಪುರವಣಿ ಹೇಳಿಕೆಗಳನ್ನು ಸಹ ದಾಖಲಿಸಿಕೊಂಡಿರುತ್ತೇನೆ. ದಿನಾಂಕಃ 22.10.2021 ರಂದು ಆರೋಪಿತನು ಬುಲೆರೋ ಪಿಕ್ ಆಪ್ ಸಂಖ್ಯೆ ಕೆಎ-32-ಸಿ-9812 ನೇದ್ದನ್ನು ಠಾಣೆಗೆ ತಂದು ಹಾಜರುಪಡಿಸಿದ್ದನ್ನು. ಸದರಿ ವಾಹನವನು ಚಾಸಾ-4 ಮತ್ತು 5 ರವರ ಸಮಕ್ಷಮ ಜಪ್ತಿಪಡಿಸಿಕೊಂಡಿದ್ದೆ. ಸಾಕ್ಷಿಯು ಜಪ್ತಿಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 4(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿಪಿ 6 ಎಂದು ಗುರುತಿಸಲಾಗಿರುತ್ತದೆ. ದಿನಾಂಕಃ 22.10.2021 ರಂದು ಆರೋಪಿತನನ್ನು ವಶಕ್ಕೆ ಪಡೆದು ಠಾಣಾ ಜಾಮೀನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 26.10.2021 ರಂದು ಆರೋಪಿತನ ಸ್ವಖುಷಿ ಹೇಳಿಕೆಯನ್ನು ನಾನು ಪಡೆದುಕೊಂಡಿರುತ್ತೇನೆ. ದಿನಾಂಕಃ 02.03.2021 ರಂದು ಆಟೋ ನಂಬರ ಕೆಎ-33-ಎ-8590 ನೇದ್ದರ ಮಾಲೀಕನಿಗೆ ಅವರಿಂದ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಬರೆದುಕೊಂಡು ಅದನ್ನು ಬಿಡುಗಡೆ ಮಾಡಿರುತ್ತೇನೆ ಸಾಕ್ಷಿಯು ಮುಚ್ಚಳಿಕೆ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 15 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 15(ಎ) ಎಂದು ಗುರುತಿಸಲಾಯಿತು. ದಿನಾನಂಕಃ 22.10.2021 ರಂದು ಬುಲೆರೋ ಗೂಡ್ಸ್ ವಾಹನ ನಂಃ ಕೆಎ-32-ಸಿ-9812 ಮೋಟಾರು ವಾಹನ ಕಾಯ್ದೆ ಕಲಂಃ 133 ನೇದ್ದರ ಪ್ರಕಾರ ಸದರಿ ವಾಹನದ

ಮಾಲೀಕನಿಗೆ ನೋಟೀಸ್ ನೀಡಿದ್ದೆ. ಅದೇ ದಿನಾಂಕದಂದು ಸದರಿ ವಾಹನದ ಮಾಲೀಕನು ನನಗೆ ನೋಟೀಸ್‌ಗೆ ಉತ್ತರವನ್ನು ನೀಡಿದ್ದನ್ನು. ಸದರಿ ನೋಟೀಸ್ ನ್ನು ನಿಪಿ 16 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 16(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಬುಲೆರೋ ವಾಹನದ ಐ.ಎಂ.ವರದಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 17 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 17(ಎ) ಎಂದು ಗುರುತಿಸಲಾಯಿತು. ದಿನಾಂಕಃ 01.03.2021 ರಂದು ಆಟೋದ ಐ.ಎಂ.ವರದಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 18 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 18(ಎ) ಎಂದು ಗುರುತಿಸಲಾಯಿತು. ದಿನಾಂಕಃ 05.05.2021 ರಂದು ಚಾಸಾ-1,6 ಮತ್ತು 7 ರವರ ಗಾಯದ ಪ್ರಮಾಣ ಪತ್ರಗಳನ್ನು ನಾನು ಪಡೆದುಕೊಂಡಿರುತ್ತೇನೆ ಅವುಗಳನ್ನು ಈಗಾಗಲೇ ನಿಪಿ 7 ರಿಂದ 9 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಗಳನ್ನು ನಿಪಿ 7(ಬಿ), 8(ಬಿ) ಮತ್ತು 9(ಬಿ) ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿದರೆ ಗುರುತಿಸಿರುತ್ತೇನೆ. ಆತನು ಗೈರು ಹಾಜರಿರುತ್ತಾನೆ, ಆತನನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಮಾಡಿರುವುದಿಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಎಸ್.ಪಿ. ರವರಿಂದಃ

ದಿನಾಂಕಃ 22.02.2021 ರಂದು ನಾನು ಠಾಣೆಯಲ್ಲಿ ಇದ್ದಾಗ ಯಾದಗಿರಿ ಸರಕಾರಿ ಆಸ್ಪತ್ರೆಯಿಂದ ಎಂ ಎಲ್ ಸಿ ಮಾಹಿತಿ ಬಂದ ನಂತರ ನಾನು ಸದರಿ ಆಸ್ಪತ್ರೆಗೆ ಹೋಗಿ ಚಾಸಾ-1,6 ಮತ್ತು 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 23.02.2021 ರಂದು ಬೆಳಗ್ಗೆ 8 ಗಂಟೆಯಿಂದ 9 ಗಂಟೆಯ ಅವಧಿಯಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಅಪಘಾತದ ಸ್ಥಳ ಪಂಚನಾಮೆಯನ್ನು ನಿಪಿ2 ರಂತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಸ್ಥಳದಲ್ಲಿ ನಿಪಿ 3 ರಂತೆ ಫೋಟೋವನ್ನು ತೆಗೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆಟೋ ಮತ್ತು ಬುಲೆರೋ ವಾಹನಗಳ ಜಪ್ತಿಪಂಚನಾಮೆಯನ್ನು ಮಾಡಿ ಅವುಗಳ ಫೋಟೋವನ್ನು ತೆಗೆದುಕೊಂಡಿದ್ದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1,6 ರಿಂದ 10 ರವರ ಹೇಳಿಕೆ ಮತ್ತು ಮರುಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ದೋಷರೋಪಣೆಯ ದಾಖಲೆಗಳ ಪ್ರಕಾರ ಆಟೋದ ಹಿಂದಿನ ಭಾಗಕ್ಕೆ ಅಪಘಾತ ಆಗಿರುತ್ತದೆ

ಎಂದು ಕಂಡುಬಂದಿರುತ್ತದೆ ಎಂದರೆ ಸರಿ. ನಿಪಿ11 ಪ್ರಕಾರ ಆಟೋದ ಮುಂದುಗಡೆ ಜಖಂ ಆಗಿರುತ್ತದೆ ಎಂದರೆ ಸಾಕ್ಷಿಯು ಆಟೋದ ಹಿಂದುಗಡೆ ಡಿಕ್ಕಿಪಡಿಸಿದ್ದರಿಂದ ಅಟೋವು ಮುಂದುಗಡೆ ಪಾಲ್ಟಿಯಾಗಿ ಜಖಂಗೊಂಡಿರುತ್ತದೆ. ಅದೇ ರೀತಿ ನಿಮ್ಮ ದೋಷರೋಪ ಪಟ್ಟಿಯಲ್ಲಿ ಆಟೋದ ಹಿಂದುಗಡೆ ಡಿಕ್ಕಿಪಡಿಸಿದ್ದರಿಂದ ಆಟೋವು ಮುಂದುಗಡೆ ಪಾಲ್ಟಿಯಾಗಿ ಜಖಂ ಗೊಂಡಿರುತ್ತದೆ ಎಂದು ಎಲ್ಲಿಯು ಸಹ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 18 ರಲ್ಲಿ ಮೋಟಾರು ವಾಹನ ಪರೀವಿಕ್ಷಕರು ಆಟೋದ ಹಿಂದುಗಡೆ ಜಖಂ ಆಗಿರುತ್ತದೆ ಎಂದು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಬುಲೆರೋ ವಾಹನದ ಮುಂದಿನ ಬಂಪಾರಕ್ಕೆ ಅಪಘಾತದಿಂದ ಜಖಂ ಆಗಿತ್ತು. ನಿಪಿ 17 ರಲ್ಲಿ ಬುಲೆರೋಕ್ಕೆ ಯಾವುದೇ ಜಖಂಗಳು ಆಗಿರುವುದಿಲ್ಲ ಎಂದು ವರದಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಬುಲೆರೋ ವಾಹನದ ತಪ್ಪಿನಿಂದ ಅಪಘಾತ ಆಗದೇ ಇದ್ದರು ಸಹ ನಾನು ಅದರ ಚಾಲಕನ ವಿರುದ್ದ ಸುಳ್ಳು ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಆರೋಪಿತನಿಗೂ ಯಾವುದೇ ರೀತಿಯ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಯಲ್ಲಿ ಆರೋಪಿತನು ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದು ಕಂಡ ಬಂದ್ದರು ಸಹ ನಾನು ಆತನ ವಿರುದ್ದ ಸುಳ್ಳು ದೋಷರೋಪಣ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.